

ಅದು ಕೂತ ಜಾಗದಲ್ಲಿ ಮಾತ್ರ ಅಸಾಧ್ಯ ಕತ್ತಲಿತ್ತು. ಅನೇಕ ತಿಂಗಳಿಂದ ಇದರ ಬೆನ್ನು ಬಿದ್ದು ನಾವೂ ಹೈರಾಣಾಗಿದ್ದೆವು. ಇಂತಹ ಕಡೆ ನೋಡಿದೆವು ಎಂಬ ಅರಣ್ಯ ರಕ್ಷಕರ ವರ್ತಮಾನ ಸಿಕ್ಕು ನಾವು ಧಾವಿಸಿ ಬರುವುದರೊಳಗೆ ಇದು ಕಣ್ಮರೆಯಾಗಿ ಬಿಡುತ್ತಿತ್ತು. ಅತಿ ವಿರಳ ಜೀವಿಯಾದ ಈ ಕಪ್ಪು ಚಿರತೆ ಇವತ್ತು ಸಿಕ್ಕಿದ್ದು ಅದೃಷ್ಟವೇ ಹೌದು. ಆದರೆ ಈ ಚಿರತೆ ತನ್ನ ಕತ್ತಲ ಕೋಣೆ ಬಿಟ್ಟು ಈಚೆಗೆ ಬರುವ ಮನಸ್ಸು ಮಾಡಲೇ ಇಲ್ಲ. ಶಿಕಾರಿ ಮಾಡಿ ಮುಗಿಸಿ, ಗಡದ್ದಾಗಿ ತಿಂದು ಯಮನಿದ್ದೆಯ ಬಾರಿಸುವ ಮೂಡಿನಲ್ಲಿತ್ತು. ಎರಡು ಗಂಟೆ ಕಾದಿದ್ದು, ನಾಳೆ ಕಾದು ಪಟ ತೆಗೆಯೋಣ ಎಂದು ವಾಪಸ್ಸಾದೆವು.

ಭದ್ರಾ ಕಾಡಿನ ಮಟ್ಟಿಗೆ ಇದೇನು ಮೊದಲ ಕಪ್ಪು ಚಿರತೆಯಾಗಿರಲಿಲ್ಲ. ಎರಡು ವರ್ಷದ ಹಿಂದಿನ